ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು-23**

ಸಂಖ್ಯೆ:ಲಿಪಿಕ(1)65/2020-21 ದಿನಾಂಕ: 16.02.2021

## ಅಧಿಕೃತ ಜ್ಞಾಪನಾ ಪತ್ರ

ವಿಷಯ:- ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ಹೊಂದಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ನೌಕರರ ಪದೋನ್ನತಿಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ:
1. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಲಿಪಿಕ(1)65/2020-21, ದಿನಾಂಕ:19.08.2020 ಹಾಗೂ 13.11.2020.
2. ಪದೋನ್ನತಿ ಸಮಾಲೋಚನೆ ದಿನಾಂಕ:24.12.2020.
3. ಪದೋನ್ನತಿ ಆದೇಶ ಸಂಖ್ಯೆ:ಲಿಪಿಕ(1)65/2020-21, ದಿನಾಂಕ:24.12.2020.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 57 ಎಸ್ಆರ್ಆರ್ 2001, ದಿನಾಂಕ: 22.05.2002.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3) ರಂತೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡಿ ದಿನಾಂಕ:24.12.2020 ರಂದು ಸಮಾಲೋಚನೆ ಮುಖಾಂತರ ಸ್ಥಳ ಆಯ್ಕೆ ಮಾಡಿಕೊಂಡಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಅದರಂತೆ ಲಿಖಿತ ಮುಖೇನ ಒಪ್ಪಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಈ ಕೆಳಕಂಡ ಕ್ರ.ಸಂ. 01 ರಿಂದ 05 ರವರೆಗಿನ ನೌಕರರುಗಳು ಸ್ಥಳ ಮಾರ್ಪಾಡು ಮಾಡಲು ಮನವಿ ಮಾಡಿರುವುದನ್ನು ಪದೋನ್ನತಿ ಆದೇಶದ ಕ್ರ.ಸಂ.(6) ರಂತೆ ಪುರಸ್ಕರಿಸಲು ಅವಕಾಶವಿರುವುದಿಲ್ಲವೆಂದು ಹಿಂಬರಹ ನೀಡಲಾಗಿದೆ.

| ಕ್ರ.ಸಂ. | ಜೇಷ್ಠತಾ ಸಂಖ್ಯೆ | ನೌಕರರ ಹೆಸರು ಮತ್ತು ಕಾರ್ಯನಿರತ ಸ್ಥಳ |
|---|---|---|
| 01 | 92 (ಕ-ಕ) | ಜಗದೀಶ, ದ್ವಿ.ದ.ಸ.<br>ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಲ್ಲರ್ಗಿ, ಬೀದರ ತಾ: ಜಿಲ್ಲೆ |
| 02 | 69 | ಎಸ್. ಅನಸೂಯ, ದ್ವಿ.ದ.ಸ.<br>ಉಪ ವಿಭಾಗೀಯ ಆಸ್ಪತ್ರೆ, ಪಾಂಡವಪುರ, ಮಂಡ್ಯ ಜಿಲ್ಲೆ |
| 03 | 433 | ಮಂಜಪ್ಪ ಎಂ.ಆರ್.<br>ಸಾರ್ವಜನಿಕ ಆಸ್ಪತ್ರೆ, ಜಗಳೂರು, ದಾವಣಗೆರೆ ಜಿಲ್ಲೆ |
| 04 | 611ಬಿ | ಮಂಜುನಾಥ ಕೆ.ಎನ್. ದ್ವಿ.ದ.ಸ.<br>ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ತುರುವೇಕೆರೆ, ತುಮಕೂರು ಜಿಲ್ಲೆ |
| 05 | 689ಎ | ವಿಜಯ ಉರಫ್ ವಿಜಯಲಕ್ಷ್ಮಿ, ದ್ವಿದಸ,<br>ಪ್ರಾ.ಆ.ಕೇಂದ್ರ, ಸುತಗುಂಡಾರ, ಬಾಗಲಕೋಟೆ ಜಿಲ್ಲೆ |

ಹಾಗೂ ಮೇಲೆ ತಿಳಿಸಿರುವ ಕ್ರ.ಸಂ. 01 ರಿಂದ 05 ರವರೆಗಿನ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿ ಹೊಂದಿ ನಿಗದಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಮಾರ್ಪಾಡು ಮಾಡಲು ಮನವಿ ನೀಡಿರುವ ನೌಕರರುಗಳು ಆಯ್ಕೆ ಮಾಡಿಕೊಂಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ 07 ದಿನಗಳೊಳಗಾಗಿ ಕರ್ತವ್ಯದಿಂದ ಬಿಡುಗಡೆಗೊಂಡು ವರದಿ ಮಾಡಿಕೊಳ್ಳಲು ವಿಫಲವಾಗಿದ್ದಲ್ಲಿ ಪದೋನ್ನತಿ ಆದೇಶದ ಕ್ರ.ಸಂ.(5)ರಂತೆ ಯಾವುದೇ ಮುನ್ಸೂಚನೆ ನೀಡದೇ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

2ನೇ ಪುಟಕ್ಕೆ...

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 57 ಎಸ್‌ಆರ್‌ಆರ್ 2001, ದಿನಾಂಕ: 22.05.2002ರನುಸಾರ ಕ್ರ.ಸಂ. 01 ರಿಂದ 05 ರವರೆಗಿನ ದ್ವಿತೀಯ ದರ್ಜೆ ಸಹಾಯಕರುಗಳಿಗೆ ದಿನಾಂಕ:24.12.2020 ರಿಂದ ಒಂದು ವರ್ಷದವರೆಗೆ ತಾತ್ಕಾಲಿಕವಾಗಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹರಿರುವುದಿಲ್ಲವೆಂಬ ಷರತ್ತಿಗೊಳಪಟ್ಟು ಪದೋನ್ನತಿಯನ್ನು ರದ್ದುಪಡಿಸಲಾಗಿದೆ ಹಾಗೂ ಸದರಿ ನೌಕರರುಗಳಿಗೆ ಪದೋನ್ನತಿಯನ್ನು ರದ್ದುಪಡಿಸಿರುವ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ತಪ್ಪದೆ ಕಡ್ಡಾಯವಾಗಿ ನಮೂದಿಸಲು ಸೂಚಿಸಿದೆ.

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ. ಸೇವೆಗಳು,
ಬೆಂಗಳೂರು.

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
2. ನಿರ್ದೇಶಕರು ಹಾಗೂ ಡೀನ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ______________________________
3. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, _________________________ ವಿಭಾಗ,
4. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
5. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
6. ಪ್ರಾಂಶುಪಾಲರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ,_____________
7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,__________________
8. ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ,__________________________________
9. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ,______________________________
10. ಆಡಳಿತ ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ, ______________________________
11. ಕಚೇರಿ ಅಧೀಕ್ಷಕರು ( ನಗದು / ಆಡಳಿತ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
12. ಸಂಬಂಧಿಸಿದ ನೌಕರರುಗಳಿಗೆ.
13. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು–ಇವರಿಗೆ ಇಲಾಖೆಯ ವೆಬ್‌ಸೈಟ್‌ ಪ್ರಕಟಿಸಲು ಸೂಚಿಸಲಾಗಿದೆ.
14. ಆದೇಶ ಪ್ರತಿ/ ಕಛೇರಿ ಪ್ರತಿ